# ನೃಪತುಂಗ ಕನ್ನಡ ಸಾಂಸ್ಕೃತಿಕ ಸಂಸ್ಥೆ (ನೋಂ)

ಕನ್ನಡ ಜಾಗೃತಿ ವರ್ಷ ೧೯೯೧

## ಸ್ಮರಣ ಸಂಚಿಕೆ

## ಮಧುರ ಮಿಲನ

### ವಾರ್ಷಿಕೋತ್ಸವ ಸನ್ಮಾನ

ದಿನಾಂಕ:
೧೨·೯·೯೩
ಭಾನುವಾರ

ರವೀಂದ್ರ
ಕಲಾಕ್ಷೇತ್ರ
ಬೆಂಗಳೂರು

ನಂ ೨೦೮೮ ಎಂ.ಐ.ಜಿ. ೩ನೇ ಹಂತ,
ಯಲಹಂಕ ಉಪನಗರ, ಬೆಂಗಳೂರು-೬೪

ಕನ್ನಡ ಜಾಗೃತಿ ವರ್ಷ 1993

## ನೃಪತುಂಗ ಕನ್ನಡ ಸಾಂಸ್ಕೃತಿಕ ಸಂಘ (ರಿ)

ಸಂಘದ ವಾರ್ಷಿಕೋತ್ಸವ ಹಾಗೂ ಸನ್ಮಾನ ಸಮಾರಂಭದ
ಸವಿನೆನಪಿಗಾಗಿ

✪ ✪ ✪

*ದಿನಾಂಕ : 12-9-1993ನೇ ಭಾನುವಾರ*


# "ಮಧುರ ಮಿಲನ"

ಸ್ಮರಣ ಸಂಚಿಕೆ ಬಿಡುಗಡೆ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

ಪ್ರಕಾಶಕರು

**ನೃಪತುಂಗ ಕನ್ನಡ ಸಾಂಸ್ಕೃತಿಕ ಸಂಘ (ರಿ)**

ನಂ. 2088, ಎಂ.ಐ.ಜಿ. 3ನೇ ಹಂತ 18ನೇ ಬಿ ಅಡ್ಡರಸ್ತೆ, .
ಕೆ.ಎಚ್.ಬಿ. ಕಾಲೋನಿ, ಯಲಹಂಕ ಉಪನಗರ,
ಬೆಂಗಳೂರು - 560 064.



ಡಾ॥ ಸಿದ್ದಯ್ಯ ಪುರಾಣಿಕ್

ಶ್ರೀಗಿರಿ, ನಂ. 415, 'ಎ' ಆಲಿ ಆಸ್ಕರ್ ರಸ್ತೆ,
ಬೆಂಗಳೂರು-560 052

# ಶುಭ ಸಂದೇಶ

ಕನ್ನಡಿಗರು ಎಚ್ಚೆತ್ತು ಒಂದಾದರೆ ಭಾರತಕ್ಕೆ ಬಲವಾಗುವರು ಕರ್ನಾಟಕಕ್ಕೆ ಗೆಲವಾಗುವರು. ಮನುಕುಲಕ್ಕೆ ಚೆಲುವಾಗುವರು ಅವರು ಎದ್ದೇಳಬೇಕು ಒಂದಾಗಬೇಕು, ಮುಂದಾಗಬೇಕು, ಕನ್ನಡ ನಾಡಿನಲ್ಲಿ ನೈಸರ್ಗಿಕ ಸಂಪನ್ಮೂಲಗಳಿಗೆ ಕೊರತೆ ಇಲ್ಲ. ಜನ ಶಕ್ತಿಗೆ ಕೊರತೆ ಇಲ್ಲ. ಬುದ್ಧಿ ಬಲಕ್ಕೆ ಕೊರತೆ ಇಲ್ಲ. ಪರಿಣತರಿಗೆ ಕೊರತೆ ಇಲ್ಲ. ಕೊರತೆ ಇರುವುದು ಒಂದೇ- ''ಕನ್ನಡ ಕುಲ'' ಒಂದು ಎಂದು ನಂಬಿ ಎಲ್ಲಾ ಕನ್ನಡಿಗರ, ಕರ್ನಾಟಕದ ಹಿತರಕ್ಷಣೆಗಾಗಿ, ಸರ್ವಾಂಗೀಣ ಪ್ರಗತಿಗಾಗಿ, ಸಂಸ್ಕೃತಿ ಸಂಪನ್ನ ಸಮೃದ್ಧಿಗಾಗಿ ಹೋರಾಡುವ ರಾಜಕೀಯ ಸಂಘಟನೆಯೊಂದನ್ನು ರೂಪಿಸಿಕೊಂಡು ನೈತಿಕ-ಅಹಿಂಸಾತ್ಮಕ-ಸ್ವಾರ್ಥ ದೂರ ಹೋರಾಟವನ್ನು ಪ್ರಾರಂಭಿಸುವುದು. ಆ ದಿನ ಬೇಗ ಬರಲಿ ಕನ್ನಡ ನಾಡಿಗೆ ಕನ್ನಡಿಗರಿಗೆ ಕರ್ನಾಟಕಕ್ಕೆ ಪರಮೋನ್ನತಿಯನ್ನು ತರಲಿ.

ಸಹಿ/-

ಡಾ॥ ಸಿದ್ಧಯ್ಯ ಪುರಾಣಿಕ್

# ಮಾನ್ಯ ಡಾ|| ಸಿದ್ದಯ್ಯ ಪುರಾಣಿಕರವರೊಡನೆ ಸಹೃದಯ ಕ್ಷಣಗಳು

ಸಂದರ್ಶಕರು: ಕೆ.ಸಿ. ಕಲಿರಾಜು
ಗೌ|| ಕಾರ್ಯದರ್ಶಿ.

ಡಾ|| ಸಿದ್ದಯ್ಯ ಪುರಾಣಿಕ್‌ರವರನ್ನು ದಿನಾಂಕ 27-7-93ರ ಮಂಗಳವಾರ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಅವರ ಮನೆ "ಶ್ರೀಗಿರಿ" ನಂ. 415 'ಎ' ಆಲಿಆಸ್ಕರ್ ರಸ್ತೆ, ಬೆಂಗಳೂರು-560 052 ರಲ್ಲಿ ಸಂಧಿಸಿ, ನಾವು ಕೈಗೊಂಡಿರುವ ಕನ್ನಡ ಜಾಗೃತಿ ವರ್ಷಾಚರಣೆ ಮತ್ತು ಸನ್ಮಾನ ಸಮಾರಂಭ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ ಸಮಾಚಾರವನ್ನು ತಿಳಿಸಿದಾಗ, ಮಾನ್ಯರು ಬಹಳ ಸಂತೋಷಗೊಂಡು ಹರ್ಷ ವ್ಯಕ್ತಪಡಿಸಿ ಕರ್ನಾಟಕದ ಜನತೆ ಹಾಗೂ ಸಂಘ ಸಂಸ್ಥೆಗಳು ಸ್ವ ಪ್ರೇರಣೆಯಿಂದ ಕನ್ನಡದ ಕೆಲಸ ಮಾಡಿದಾಗ ಮಾತ್ರ ಕನ್ನಡದ ಏಳ್ಗೆ ಸಾಧ್ಯವೆಂದು ಹೇಳಿ ನಮ್ಮ ಕಾರ್ಯಕ್ರಮದಲ್ಲಿ ಭಾಗಿಗಳಾಗಲು ತುಂಬು ಹೃದಯದಿಂದ ಒಪ್ಪಿಗೆ ನೀಡಿ ಶಾಂತಿ, ಸಹನೆ, ಸದ್ಭಾವನೆಗಳಿಂದ ಮಾತನಾಡಿ ಅವರ ವೈಯುಕ್ತಿಕ ವಿವರಗಳನ್ನು ತಾವೇ ಸ್ವತಃ ಬರೆದುಕೊಟ್ಟು ಸಹಕರಿಸಿರುತ್ತಾರೆ. ಇದಲ್ಲದೆ ಅನೇಕ ಸಂದರ್ಭಗಳಲ್ಲಿ ಮಾನ್ಯರನ್ನು ಭೇಟಿ ಮಾಡಿದಾಗ, ಯಾವ ತಾರತಮ್ಯ ಭಾವನೆಗಳಿಲ್ಲದೆ ಮುಕ್ತ ಮನಸ್ಸಿನಿಂದ ಮಾತನಾಡುವ ವಿಶಾಲ ಹೃದಯದ ದಕ್ಷ ಆಡಳಿತಗಾರರು, ಸಾಹಿತಿಗಳು, ನಾಟಕ ರಚನಾಕಾರರು ಮತ್ತು ನಾಟಕ ಪ್ರಯೋಗಶೀಲರು, ಆಡಂಬರದ ಬದುಕಿಲ್ಲದ ಸರಳ ಜೀವನದ ಕಟ್ಟಾ ಕನ್ನಡಾಭಿಮಾನಿ ಮಹಾನ್ ವ್ಯಕ್ತಿಯವರ ವೈಯುಕ್ತಿಕ ವಿವರಗಳು :

| | | |
|---|---|---|
| 1. | ನಾಮಧೇಯ | ಸಿದ್ಧಯ್ಯ |
| | ಅಡ್ಡ ಹೆಸರು | ಪುರಾಣಿಕ್ |
| 2. | ತಂದೆ, ತಾಯಿಯವರ ಹೆಸರು | ಪಂ. ಕಲ್ಲಿನಾಥ ಶಾಸ್ತ್ರಿಗಳು-ದಾನಮ್ಮನವರು |
| 3. | ಅಣ್ಣ-ತಮ್ಮಂದಿರು | ಅನ್ನದಾನಯ್ಯ ಪುರಾಣಿಕ-ಅಡ್ವೊಕೇಟ್, ಬೆಂಗಳೂರು<br>ಬಸವರಾಜ ಪುರಾಣಿಕ-ಪ್ರಿನ್ಸಿಪಾಲ, ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ. |
| 4. | ಅಕ್ಕ-ತಂಗಿಯರು | ವೀರಾಂಬೆ-ಶಿವಾಧೀನರಾಗಿದ್ದಾರೆ.<br>ಶರಣಾಂಬೆ. |
| 5. | ಹುಟ್ಟಿದ ಸ್ಥಳ | ದ್ಯಾಂಪುರ, ಯಲಬರ್ಗಾ ತಾಲೂಕು, ರಾಯ್ಚೂರು ಜಿಲ್ಲೆ |
| | ಎಷ್ಟನೆ ಮಗ | ಮೊದಲ ಮಗ |
| | ಹುಟ್ಟಿದ ದಿನಾಂಕ-ವಾರ | 18-6-1918 ಬಸವ ಜಯಂತಿಯ ದಿನ |
| | ವಯಸ್ಸು | 75 |
| 6. | ವಾಸಸ್ಥಳ-ವಿಳಾಸ | 'ಶ್ರೀಗಿರಿ' 415 'ಎ', ಆಲಿ ಆಸ್ಕರ್ ರಸ್ತೆ, ಬೆಂಗಳೂರು-52. |
| 7. | ವ್ಯಾಸಂಗ | ಬಿ.ಎ., ಎಲ್‌ಎಲ್.ಬಿ. (ಉಸ್ಮಾನಿಯಾ ವಿಶ್ವವಿದ್ಯಾಲಯ) |
| 8. | ಚಿಕ್ಕಂದಿನಲ್ಲಿ ಏನಾಗಬೇಕೆಂಬ ಆಸೆ ಇತ್ತು | ಪದವೀಧರನಾಗಬೇಕೆಂದಿತ್ತು. ತಂದೆಯವರ ಆಸೆ ವಕೀಲನಾಗಬೇಕೆಂದಿತ್ತು. |
| 9. | ಸಾಹಿತ್ಯದ ಒಲವು ಮೂಡಿದ್ದು ಹೇಗೆ | ಕಲಬುರ್ಗಿಯ ಕನ್ನಡ ಸಂಘ ಕವಿತಾ ಸ್ಪರ್ಧೆ ಏರ್ಪಡಿಸಿದ್ದರು.ಒಂದೆ ಕವಿತೆಯಿಂದ ಸ್ಪರ್ಧೆ ಹೇಗೆ ಸಾಧ್ಯ? ಸಂಘ ಬಹಿರಂಗವಾಗಿ ಮನವಿ ಮಾಡಿತು, ಸ್ಪರ್ಧೆ ನಿಲ್ಲದಿರಲೆಂದು ಹದಿನೈದರ ಹುಡುಗನಾಗಿದ್ದ |

| | | |
|---|---|---|
| | | ನಾನು ಕವಿತೆ ಕಳಿಸಿದೆ ಅದಕ್ಕೆ ಬಹುಮಾನ ಬರಲು ಬರೆಯತೊಡಗಿದೆ. |
| 10. | ಮಾತೃ ಭಾಷೆ | ಕನ್ನಡ |
| 11. | ವಿವಾಹ ಯಾವಾಗ | 1945 |
| | ಪತ್ನಿ ಹೆಸರು | ಗಿರಿಜಾದೇವಿ |
| 12. | ತಮ್ಮ ವಿವಾಹ ಸಂಪ್ರದಾಯಿಕದೇ ಅಥವಾ ಪ್ರೇಮ ವಿವಾಹವೇ. | ಸಾಂಪ್ರದಾಯಿಕವಾದರೂ ಮೆಚ್ಚಿ ಮದುವೆಯಾದುದು ನಿಜ. |
| 13. | ಮಕ್ಕಳು | |
| | ಗಂಡು | ಪ್ರಸನ್ನಕುಮಾರ-ಡೆಪ್ಯುಟಿ ಜನರಲ್ ಮ್ಯಾನೇಜರ್, ಎಚ್.ಎಂ.ಟಿ. ಗಡಿಯಾರ ಕಾರ್ಖಾನೆ. |
| | ಹೆಣ್ಣು | ಶ್ರೀಮತಿ ವಿಜಯಾನಂದೀಶ್ವರ-ರಾಜಾಜಿನಗರ, ಬೆಂಗಳೂರು-11 |
| | ವೃತ್ತಿ/ಪ್ರವೃತ್ತಿ | ಡಾ.ಶವಗೀತಾ ಪೂಜಾರಿ. ಎಂ.ಡಿ., ಒಕ್ಲಾ ಹೋಮಾ, ಅಮೇರಿಕಾ |
| | | ಶ್ರೀಮತಿ ಭಾರತಜ್ಯೋತಿ |
| | | ಮೃತ್ಯುಂಜಯಪ್ಪ ಭದ್ರಾವತಿ. |
| 14. | ಅಭಿರುಚಿ | ಸಾಹಿತ್ಯ-ಕಲೆ-ಆಡಳಿತ-ಕನ್ನಡ ಹೋರಾಟ |
| 15. | ರಚಿಸಿದ ಸಾಹಿತ್ಯ ಯಾವುವು, ಎಷ್ಟು | ಎಂಟು ಕವನಸಂಗ್ರಹಗಳು, ಎಂಟು ಮಕ್ಕಳ ಪುಸ್ತಕಗಳು, ಒಂಭತ್ತು ಚರಿತ್ರೆಗಳು, ಮೂರು ವಚನ ಸಂಗ್ರಹಗಳು, ಎರಡು ಕಥಾ ಸಂಗ್ರಹಗಳು, ಒಂದು ಕಾದಂಬರಿ, ಐದು ನಾಟಕಗಳು, ಹನ್ನೆರಡು ಸಂಪಾದಿತ ಕೃತಿಗಳು, ಎರಡು ಅನುವಾದಗಳು, ಎರಡು ವಯಸ್ಕರ ಕೃತಿಗಳು ಇತ್ಯಾದಿ. |
| 16. | ಸಾಹಿತ್ಯದ ಬಗ್ಗೆ ಅನಿಸಿಕೆ | ಭಾವಪರತೆ, ಚಿಂತನಪರತೆ-ಜನಪರತೆಗಳ ತ್ರಿವೇಣಿ ಸಂಗಮವಾಗಿರಬೇಕು. |
| 17. | ಇತರೆ ಭಾಷೆಗಳಲ್ಲಿ ಯಾವುವು | Value System in Vachana Literature |
| 18. | ಪ್ರಥಮ ರಚನೆ ಯಾವುದು | ಆತ್ಮಾರ್ಪಣಾ (ನಾಟಕ) |
| 19. | ನಾಟಕ ರಚಿಸಿರುವಿರಾ, ಯಾವುವು | ಆತ್ಮಾರ್ಪಣಾ, ಭಾರತವೀರ, ರಜತ ರೇಖೆ, ಭಗ್ನ ನೂಪುರ, ಭ್ರಮರದೂತ. |
| 20. | ನಾಟಕ ಪ್ರಯೋಗ ಮಾಡಿರುವಿರಾ ಯಾವುವು | ಆತ್ಮಾರ್ಪಣಾ, ಭಾರತ ವೀರ, ಬೆಳವಡಿ ಮಲ್ಲಮ್ಮ ಇತ್ಯಾದಿ. |
| 21. | ಪ್ರಥಮ ನಾಟಕ ಯಾವುದು | ಬೆಳವಡಿ ಮಲ್ಲಮ್ಮ (ಅಪ್ರಕಟಿತ) |
| 22. | ತಾವು ನಾಟಕದಲ್ಲಿ ನಟಿಸಿದ್ದೀರಾ, ಯಾವುವು | ಬೆಳವಡಿ ಮಲ್ಲಮ್ಮದಲ್ಲಿ ಶಿವಾಜಿ, ಆತ್ಮಾರ್ಪಣದಲ್ಲಿ ಬಸವಣ್ಣ, 'ಉದ್ಧಾರ'ದಲ್ಲಿ ರುದ್ರಯ್ಯ, 'ಬಿ.ಎ.'ದಲ್ಲಿ ವಿವೇಕಾನಂದ ಇತ್ಯಾದಿ. |
| 23. | ತಾವು ಸಿನಿಮಾ ನಿರ್ದೇಶನ ಮಾಡಿರುವಿರಾ, ಯಾವುವು | ಇಲ್ಲ |
| 24. | ತಾವು ನಟಿಸಿದ್ದೀರಾ ಯಾವುವು | ಇಲ್ಲ |
| 25. | ನಾಟಕದಲ್ಲಿ ರಾಜ್ಯ/ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಪಡೆದಿರುವಿರಾ, ಯಾವುವು | ಇಲ್ಲ |
| 26. | ಸಿನಿಮಾದಲ್ಲಿ -- " -- ಯಾವುವು | ಇಲ್ಲ |
| 27. | ಸಂಗೀತದ ಬಗ್ಗೆ ತಮ್ಮ ಅನಿಸಿಕೆ | ಸಂವೇದನಶೀಲ ಶಾಸ್ತ್ರೀಯ ಸಂಗೀತ, ಭಾವಪೂರ್ಣ ಕಾವ್ಯ ಗಾಯನ. |
| 28. | ನಾಟಕ ಅಥವಾ ಚಲನಚಿತ್ರ ಯಶಸ್ಸಿಗೆ ಏನೇನು ಮುಖ್ಯ | ಒಳ್ಳೆಯ ಕಥೆ, ಜೀವಂತ ಸಂಭಾಷಣೆಗಳು, ಔಚಿತ್ಯ ಪೂರ್ಣ ಅಭಿನಯ, ಗುಣಗ್ರಾಹಿ ಪ್ರೇಕ್ಷಕರು. |
| 29. | ಪಾತ್ರ , ಹಾಡುಗಳನ್ನು ರಿಚಿಸಿರುವಿರಾ, ವಿವರ | ನನ್ನ ಕವನಗಳಲ್ಲಿ ಬಹುಪಾಲು ಹಾಡಲು ಬರುವಂತಿವೆ. 'ಹೂವ ತರಲಿಲ್ಲ' |

| | | |
|---|---|---|
| | | ಎಂಬ ಧ್ವನಿ ಸುರುಳಿಯೂ ಪ್ರಕಟವಾಗಿದೆ. |
| 30. | ತಮ್ಮನ್ನು ಬಂಡಾಯ ಸಾಹಿತಿ ಎಂದು ಕರೆಯಲು ಕಾರಣ | ಕರೆಯುವವರಿಗೆ ಗೊತ್ತು. ಅನ್ಯಾಯ ಅತ್ಯಾಚಾರಗಳ ಬಗ್ಗೆ ಪ್ರತಿಭಟನೆ ನನಗೆ ಪ್ರಿಯವಾದುದು ಕಾರಣವಾಗಿರಬಹುದು. |
| 31. | ಕನ್ನಡ ಜನತೆಯ ಬಗ್ಗೆ ತಮ್ಮ ಅನಿಸಿಕೆ | ಸಜ್ಜನರು, ಆದರೆ ಸೋಮಾರಿಗಳು |
| 32. | ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ ಕಲೆ ಬಗ್ಗೆ ತಮ್ಮ ಅನಿಸಿಕೆ | ಅಭಿಮಾನಾಸ್ಪದ |
| 33. | ಕನ್ನಡ ಸಾಹಿತಿಗಳ ಬಗ್ಗೆ ತಮ್ಮ ಅನಿಸಿಕೆ | ಅಸಂಘಟಿತರು, ವೈಯಕ್ತಿಕವಾಗಿ ಬಹಳಷ್ಟು ಸಾಧಿಸಿದವರು. |
| 34. | ಕನ್ನಡ ನಾಟಕ ರಂಗದ ಬಗ್ಗೆ | ದಮನೀಯ |
| 35. | ಕನ್ನಡ ಚಿತ್ರ ಜಗತ್ತಿನ ಬಗ್ಗೆ | ಬೆರಗುಗೊಳಿಸುವ ಸೃಷ್ಟಿ |
| 36. | ಕನ್ನಡ ನಟ, ನಟಿಯರ ಬಗ್ಗೆ | ಹಲವರು ಹೆಮ್ಮೆ ಹುಟ್ಟಿಸಿದ್ದಾರೆ, ಹೊಸಬರು ಬರಬೇಕು. |
| 37. | ಸಾಹಿತಿ, ಕಲಾವಿದ, ನಟ ಇವರುಗಳು ಜನತೆಯಿಂದ ಸರ್ಕಾರದಿಂದ ಏನನ್ನು ಬಯಸುತ್ತಾರೆ. | ಸಹಕಾರವನ್ನು |
| 38. | ನಿಮ್ಮ ಮೆಚ್ಚಿನ ಊಟ, ಉಪಹಾರ | ಬಿಳಿ ಜೋಳದ ರೊಟ್ಟಿ, ತರಕಾರಿ, ಉಪ್ಪಿಟ್ಟು-ಇತ್ಯಾದಿ. |
| 39. | ತಮ್ಮ ದಿನಚರಿ | ಪೂರ್ವಾಹ್ನ: ಲಘು ವ್ಯಾಯಾಮ, ಸ್ನಾನ, ಪೂಜೆ, ಉಪಾಹಾರ, ಪತ್ರಿಕೆಗಳ ಅವಲೋಕನ, ಲೇಖನ ಇತ್ಯಾದಿ.<br>ಮಧ್ಯಾಹ್ನ: ಪತ್ರವ್ಯವಹಾರ, ಅಧ್ಯಯನ, ಕನ್ನಡದ ಕಾರ್ಯಕ್ರಮಗಳು, ಸಮಯ ಉಳಿದರೆ ದೂರದರ್ಶನ ವೀಕ್ಷಣೆ. |
| 40. | ದೇವರ ಬಗ್ಗೆ ತಮ್ಮ ಅನಿಸಿಕೆ | ಸರ್ವಾಂತರ್ಯಾಮಿ ಶಕ್ತಿಯೊಂದರಲ್ಲಿ ವಿಶ್ವಾಸ. |
| 41. | ಕನ್ನಡ ಸಂಘ ಸಂಸ್ಥೆಗಳ ಬಗ್ಗೆ ತಮ್ಮ ಅನಿಸಿಕೆ | ಬಿಡಿಯಾಗಿರುವುವೆಲ್ಲ ಇಡಿಯಾಗಬೇಕು. |
| 42. | ತಾವು ಹೊರ ದೇಶಗಳ ಪ್ರವಾಸ ಮಾಡಿರುವಿರಾ ಯಾವ ದೇಶಗಳಿಗೆ | ಅಮೇರಿಕಾ, ಕೆನಡಾ, ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್ ಇತ್ಯಾದಿ. |
| | ನಿಮಿತ್ತ | ಮಗಳ ಕರೆ-ಪರ್ಯಟನೋತ್ಸುಕತೆ. |
| 43. | ನಮ್ಮ ಮತ್ತು ಹೊರ ದೇಶಗಳ ಸಂಸ್ಕೃತಿ, ಸಾಹಿತ್ಯ ಕಲೆ ಬಗ್ಗೆ ತಮ್ಮ ಅನಿಸಿಕೆ | ನುಡಿಯಲ್ಲಿ ನಮ್ಮದು ಶ್ರೇಷ್ಠ, ನಡೆಯಲ್ಲಿ ಅವರದು. |
| 44. | ತಮಗೆ ಬಂದಿರುವ ಬಿರುದುಗಳು, ಪ್ರಶಸ್ತಿಗಳು | ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್. ಕಲಕತ್ತೆಯ ಭಾರತೀಯ ಭಾಷಾಪರಿಷತ್ತಿನ ಬಿಲ್ವಾರ ಪ್ರಶಸ್ತಿ. ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ. ಪ್ರೊ॥ ಮಾಳವಾಡ ಪ್ರಶಸ್ತಿ ಇತ್ಯಾದಿ. |
| 45. | ಮುಂದಿನ ನಿಮ್ಮ ಯೋಜನೆಗಳು | ಕೊನೆಯ ಉಸಿರಿನವರೆಗೆ ಕನ್ನಡದ, ಕನ್ನಡಿಗರ ಸೇವೆ. |
| 46. | ತಮ್ಮ ಜೀವನದ ಧ್ಯೇಯ | ಕನ್ನಡ, ಕನ್ನಡಿಗ, ಕರ್ನಾಟಕ |
| 47. | ತಮ್ಮ ಗುರಿ ಸಾಧನೆ ಆಗಿದೆ ಎನಿಸುವುದೆ. | ಇಲ್ಲ. |

27-7-1993

ಸಿದ್ಧಯ್ಯ ಪುರಾಣಿಕ